8. 1997-98ರಿಂದ ಇದುವರೆಗೆ 1985 ಹೊಸ ಬಸ್ಸುಗಳನ್ನು ಕಾರ್ಯಾಚರಣೆಗೆ ಸೇರಿಸಲಾಗಿದೆ.

ಅ) ಹೌದು. ಬಾಗಲಕೋಟೆ ವಿಭಾಗದ ವ್ಯಾಪ್ತಿಯಲ್ಲಿ ಬರುವ ಬೀಳಗಿ ತಾಲ್ಲೂಕಿನ ಅನಗವಾಡಿ, ಕಾತರಕಿ ಅಲಗುಂಡಿ ಮುಖಾಂತರ ಹೋಗುವ ಸಾರಿಗೆಗಳನ್ನು ಕಳೆದ ನಾಲ್ಕು ವರ್ಷಗಳಲ್ಲಿ ಕೇವಲ ಮೂರು ಅನುಸೂಚಿಗಳನ್ನು ಮಾತ್ರ ಮಾರ್ಗ ಬದಲಾವಣೆ ಮಾಡಲಾಗಿದೆ ಅವುಗಳು (1) ಬಾಗಲಕೋಟೆ-ಸಾಂಗಲಿ ಅನುಸೂಚಿ - (2) ಬಾದಾಮಿ ಕೆಜಾಲ್ಲಾಪೂರ ಅನುಸೂಚಿ - 2

ಸದರೀ ಅನುಸೂಚಿಗಳು ಅನಗವಾಡಿ ಕಾತರಕಿ ಅಲಗುಂಡಿ ಮಾರ್ಗದ ಮೇಲೆ ಓಡುವಾಗ ಅವುಗಳ ಜನದಟ್ಟಣೆ ಹಾಗೂ ಪ್ರತಿ ಕಿ.ಮೀ.ಗಳ ಆದಾಯ ಬಹಳ ಕಡಿಮೆ ಆಗಿದ್ದುದರಿಂದ ಸದರೀ ಅನುಸೂಚಿಗಳನ್ನು ಪರಿಷ್ಕರಿಸಲಾಗಿದೆ.

ಇ) ಬಾಗಲಕೋಟೆ ವಿಭಾಗದ ವ್ಯಾಪ್ತಿಯಲ್ಲಿ ಬರುವ ಒಟ್ಟು 729 ಹಳ್ಳಿಗಳ ಪೈಕಿ ಕೇವಲ 15 ಹಳ್ಳಿಗಳಿಗೆ ರಸ್ತೆ ಸಂಪರ್ಕ ಇಲ್ಲದೆ ಇರುವುದರಿಂದ ಸಾರಿಗೆ ಸೌಕರ್ಯವನ್ನು ಒದಗಿಸಿಲ್ಲ. ಬೀಳಗಿ ತಾಲ್ಲೂಕಿನ 65 ಹಳ್ಳಿಗಳ ಪೈಕಿ 64 ಹಳ್ಳಿಗಳಿಗೆ ಸಾರಿಗೆ ಸೌಲಭ್ಯ ಒದಗಿಸಲಾಗಿದ್ದು ಶಿವಾಪೂರ ಎಂಬ ಒಂದು ಗ್ರಾಮಕ್ಕೆ ರಸ್ತೆ ಸಂಪರ್ಕ ಇಲ್ಲದೇ ಇರುವುದರಿಂದ ಸಾರಿಗೆ ಸೌಕರ್ಯ ಒದಗಿಸಲಾಗಿಲ್ಲ.

ಬಾಗಲಕೋಟೆ ವಿಭಾಗದ ಗ್ರಾಮೀಣ ಭಾಗದಲ್ಲಿ ಪ್ರತಿ ದಿನ 130 ಅನುಸೂಚಿಗಳಿಂದ ಸರಾಸರಿ 56081 ಕಿ.ಮೀ.ಗಳ ಸಾರಿಗೆ ಸೌಲಭ್ಯ ಕಲ್ಪಿಸಿಕೊಡಲಾಗಿದೆ.

ಅನಗವಾಡಿ, ಕಾತರಕಿ, ಅಲಗುಂಡಿ ಗ್ರಾಮದ ಜನರಿಗೆ

(1) ಬಾಗಲಕೋಟೆ - ಬೀಕಲಗುಂಡಿ ಮಾರ್ಗ ಅನಗವಾಡಿ ಕಾತರಕಿ 2 ಸರತಿಗಳನ್ನು.

(2) ಬಾಗಲಕೋಟೆ-ಬೀಳಗಿ ಮಾರ್ಗ ಅನಗವಾಡಿ-ಕಾತರಕಿ, ಚಾನಮಟ್ಟಿ, ಸುನಗ, ಒಂದು ಸರತಿಯನ್ನು ಹಾಗೂ ಈ ಭಾಗದ ಜನರ ಅನುಕೂಲಕ್ಕಾಗಿ ಹೆಚ್ಚಿನ ನಗರ ಸಾರಿಗೆ ಮಾದರಿಯ ಬಸ್ಸುಗಳನ್ನು ಕಲ್ಪಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಅಲ್ಲದೆ ಮುಧೋಳ ಘಟಕದಿಂದ 07 ಸುತ್ತುಗಳ ಸರತಿಗಳನ್ನು ಹಾಗೂ ಬಾಗಲಕೋಟೆಯಿಂದಾ 4 ಸುತ್ತುಗಳ ಸರತಿಗಳನ್ನು ಓಡಿಸಲಾಗುತ್ತಿದೆ. ಹಾಗೂ ಮೇಲಿನ ಗ್ರಾಮಗಳಿಗೆ ಎರಡು ಬಾಗಿಲುಗಳ ವಾಹನಗಳನ್ನು ಓಡಿಸಲು ಯೋಚಿಸಲಾಗಿದೆ.

ಆನೇಕಲ್ ಕ್ಷೇತ್ರದಲ್ಲಿ ಆಶ್ರಯ ಯೋಜನೆಯಡಿ ನಿವೇಶನ ಹಂಚಿಕೆ

1768- ಶ್ರೀ ಎ. ನಾರಾಯಣ ಸ್ವಾಮಿ (ಆನೇಕಲ್ಲು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆನೇಕಲ್ ಕ್ಷೇತ್ರದಲ್ಲಿ ಆಶ್ರಯ ಯೋಜನೆ ಅಡಿಯಲ್ಲಿ 8 ವರ್ಷಗಳಿಂದ ನಿವೇಶನ ಹಂಚಿದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಇ) ನಿವೇಶನ ಹಂಚಿಕೆ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) 1996-97, 1997-98ನೇ ಸಾಲಿನಲ್ಲಿ ಆನೇಕಲ್ ತಾಲ್ಲೂಕಿನಲ್ಲಿ ಒಟ್ಟು 58 ನಿವೇಶನಗಳನ್ನು ಹಂಚಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಆನೇಕಲ್ ತಾಲ್ಲೂಕಿನ 21 ಗ್ರಾಮ ಪಂಚಾಯತಿ ವ್ಯಾಪ್ತಿಯ 141 ಗ್ರಾಮಗಳಲ್ಲಿ 3715 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಕಂದಾಯ ಇಲಾಖೆಯಿಂದ ಜಿಲ್ಲಾ ಪಂಚಾಯತಿಗೆ ಸೂಕ್ತ ಜಮೀನು ವರ್ಗಾಯಿಸಿದ ಕೂಡಲೇ ನಿವೇಶನಗಳನ್ನು ರಚಿಸಿ ಹಂಚಲು ಕ್ರಮ ಕೈಗೊಳ್ಳಲಾಗುವುದು.

ಕುಂದಾಪುರ ತಾಲ್ಲೂಕಿನ ಹೆಚ್ಚುವರಿ ಬಗರ್ ಹುಕುಂ ಸಾಗುವಳಿ ಸಮಿತಿ.

1769- ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಂದಾಪುರ ತಾಲ್ಲೂಕಿನ ಹೆಚ್ಚುವರಿ ಬಗರ್‌ಹುಕುಂ ಸಮಿತಿಯ ಇತ್ಯರ್ಥ ಮಾಡಿದ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು ?

ಆ) ಅರ್ಜಿದಾರರಿಗೆ ಕಾರಣ ಕೇಳಿ ನೋಟೀಸು ನೀಡಿದ ಅರ್ಜಿಗಳನ್ನು ತಿರಸ್ಕರಿಸುವುದು ಅರ್ಜಿದಾರರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೆ ? ಹಾಗಿದ್ದಲ್ಲಿ ಆ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :

ಅ) 17249

ಆ) ಸರ್ಕಾರದ ನೀತಿ ನಿಯಮಗಳ ಮೇರೆಗೆ ಕುಮ್ಕಿ, ಪೋರಂಬೋಕು ಮೀಸಲು ಅರಣ್ಯ ನೈಜ ಅಕ್ರಮಣವಿಲ್ಲದ ಹಾಗೂ ಅರಣ್ಯಗಳಲ್ಲಿ ಅಕ್ರಮಣ ಮಾಡಿ ನಮೂನೆ 50 ರಲ್ಲಿ ಸಲ್ಲಿಸಿದ ಅರ್ಜಿಗಳನ್ನು ಮಾತ್ರ ತಿರಸ್ಕರಿಸಲಾಗಿದೆ. ಇದು ಸರ್ಕಾರದ ದೋರಣೆಯಂತೆ ಕೈಗೊಂಡಿರುವುದರಿಂದ ಯಾವುದೇ ರೀತಿಯ ಅನ್ಯಾಯವಾಗಿರುವುದಿಲ್ಲ.

ರಾಜ್ಯದಲ್ಲಿ ಹೊಸ ಕೃಷಿ ನೀತಿ

1770 - ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಪ್ಪ (ತಿಕೋಟ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?